18.	Shimoga	1
19.	Tumkur	2
	Total	113

ಬೀದರ್ ಜಿಲ್ಲೆಯಲ್ಲಿ ನಡೆದ ಕೊಲೆ ದರೋಡೆ ವರದಕ್ಷಿಣೆ ಪ್ರಕರಣಗಳ ಸಂಖ್ಯೆ

370 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಕೊಲೆ ದರೋಡೆ, ವರದಕ್ಷಿಣೆ ಪ್ರಕರಣಗಳು ಹಾಗೂ ಕೊಲೆ ಯತ್ನದ ಪ್ರಕರಣಗಳು ಎಷ್ಟು ನಡೆದಿವೆ? (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಅವುಗಳನ್ನು ತಡೆಗಟ್ಟಲು ಯಾವವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) 1993ನೇ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ಒಟ್ಟು 39 ಕೊಲೆ ಪ್ರಕರಣಗಳು, 10 ದರೋಡೆ ಪ್ರಕರಣಗಳು 6 ವರದಕ್ಷಿಣೆ ಪ್ರಕರಣಗಳು ಮತ್ತು 56 ಕೊಲೆ ಪ್ರಕರಣಗಳು ವರದಿಯಾಗಿರುತ್ತವೆ.

ತಾಲ್ಲೂಕುವಾರು ಅಂಕಿಅಂಶಗಳು ಈ ಕೆಳಕಂಡಂತೆ ಇವೆ. 1-1-93 ರಿಂದ 31-12-93ರವರೆಗೆ

	ತಾಲ್ಲೂಕು	ಕೊಲೆ	ದರೋಡೆ	ವರದಕ್ಷಿಣೆ	ಸಾವು	ಕೊಲೆ ಪ್ರಯತ್ನ
1.	ಬೀದರ್	13	3	2		20
2.	ಔರಾದ್	5	4	1		2
3.	ಹುಮನಾಬಾದ್	7	2	-		11
4.	ಭಾಲ್ಕಿ	5	-	1		19
5.	ಬಸವಕಲ್ಯಾಣ	9	1	2		4
	ಒಟ್ಟು	39	10	6		56

ಸಾಮಾನ್ಯವಾಗಿ ಕೊಲೆಯ ಪ್ರಕರಣಗಳು ಅಸ್ತಿವಿವಾದ ಕೋಮುಗಲಭೆ, ಪ್ರೇಮ ಪ್ರಕರಣ, ಹಳೇ ವೈಷಮ್ಯ ಮುಂತಾದ ಕಾರಣಗಳಿಂದ ಕೊಲೆಗಳು ಹೆಚ್ಚಾಗಿ ಸಂಬಂಧಿಸುತ್ತವೆ.ಹಾಗೂ ರೌಡಿಗಳ ವೈಷಮ್ಯದಿಂದಲೂ ಬಹಳಷ್ಟು ಕೊಲೆಯ ಪ್ರಕರಣಗಳು ಕಂಡು ಬರುತ್ತವೆ.

ಭೂ ವಿವಾದಗಳಿರುವ ಪ್ರದೇಶಗಳಲ್ಲಿ ಭಾ.ದಂ.ಸಂ. 145 ಪ್ರಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಮುಂಚಿತವಾಗಿಯೇ ವರದಿ ಮಾಡಲಾಗುತ್ತಿದೆ. ಹಳ್ಳಿಗಳಲ್ಲಿ ಗಸ್ತು ಮಾಡುವ ಪೊಲೀಸ್ ಅಧಿಕಾರಿಗಳು ವೈಷಮ್ಯ ಹೆಚ್ಚಾಗುವ ಹಳ್ಳಿಗಳನ್ನು ಗುರುತಿಸಿ ಮಂಜಾಗೃತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆದೇಶಿಸಲಾಗಿದೆ. ಮತೀಯ ಮತ್ತು ಜಾತಿ ವೈಷಮ್ಯಗಳ ಪ್ರಕರಣಗಳಲ್ಲಿ ಕೊಲೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ವಿವಾದಗಳಿರುವ ಸ್ಥಳಗಳಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಹಾಗೂ ಶಾಂತಿ ಸಭೆಗಳನ್ನು ನಡೆಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ದರೋಡೆ ಪ್ರಕರಣಗಳು ಲಾಭಕ್ಕಾಗಿ ಮತ್ತು ಕೋಮು ಗಲಭೆಗಳಿಂದ ನಡೆಯುವಂತಹ ಪ್ರಕರಣಗಳಾಗಿರುತ್ತವೆ. ದರೋಡೆಗಳನ್ನು ತಡೆಗಟ್ಟಲು ಜಿಲ್ಲಾ ಪೊಲೀಸು ಅಧಿಕಾರಿಗಳು, ವಿಭಾಗೀಯ ಪೊಲೀಸು ಅಧಿಕಾರಿಗಳಿಗೆ ಜಾಗರೂಕರಾಗಿರುವಂತೆ ಮೇಲಿಂದ ಮೇಲೆ ಆದೇಶಗಳನ್ನು ನೀಡಲಾಗುತ್ತಿದೆ. ಅಂತರರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕಮ್ಮಟಗಳನ್ನು ಏರ್ಪಡಿಸಿ ದರೋಡೆ ತಡೆ ಮತ್ತು ಪತ್ತೆ ಬಗ್ಗೆ ವಿಚಾರ ವಿನಿಯಮ ನಡೆಸಿ ದರೋಡೆ ನಿಯಂತ್ರಣ ಮತ್ತು ಪತ್ತೆಗೆ ಪ್ರಯತ್ನಿಸಲಾಗಿದೆ.

ಅಂತರ ರಾಜ್ಯ ಸಮಾವೇಶ ಮತ್ತು ದಕ್ಷಿಣ ರಾಜ್ಯಗಳ ಸಿಐಡಿಯ ಪ್ರಧಾನ ಅಧಿಕಾರಿಗಳ ಸಮ್ಮೇಳನವನ್ನು ಏರ್ಪಡಿಸಿದ್ದು ದರೋಡೆಗಳ ಬಗ್ಗೆ ಚರ್ಚಿಸಿ ಅಪರಾಧಿಗಳನ್ನು ಹಿಡಿಯುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ. ದರೋಡೆ ಕೋರರ ಭಾವಚಿತ್ರಗಳನ್ನು ಮತ್ತು ವಿವರಗಳನ್ನು ಎನ್.ಸಿ.ಆರ್.ಬಿ.ಯಲ್ಲಿ ಶೇಖರಿಸಿ ಅವುಗಳ ಸಹಾಯದಿಂದ ದರೋಡೆಕೋರರನ್ನು ಪತ್ತೆ ಹಚ್ಚಲು ಉಪಯೋಗಿಸಲಾಗುತ್ತಿದೆ.

ಈ ಬಗ್ಗೆ ರಾಜ್ಯದಲ್ಲೂ 3 "ದರೋಡೆ ತಡೆ ದಳ"ಗಳನ್ನು (ಬಳ್ಳಾರಿ, ಗುಲ್ಬರ್ಗಾ ಮತ್ತು ಬೆಂಗಳೂರು) ನಿಯೋಜಿಸಲಾಗಿದ್ದು, ಅವುಗಳು ಕರ್ತವ್ಯ ನಿರ್ವಹಿಸುತ್ತಿವೆ.

ಇನ್ನು ರಾಜ್ಯದಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಸಾವು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖೆ: ವಿಚಾರಣೆ ನಡೆಸಲು ಸಿಓಡಿಯಲ್ಲಿ ಒಂದು ಪ್ರತ್ಯೇಕ ವರದಕ್ಷಿಣೆ ನಿಷೇಧ ದಳವನ್ನು ರಚಿಸಲಾಗಿದೆ ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು 1990 ಆಗಸ್ಟ್ ತಿಂಗಳಿನಲ್ಲಿ ಸ್ಥಾಪಿಸಲಾಗಿದೆ

ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯ ಕಾಲದಲ್ಲಿ ಉಂಟಾಗುವ ಲೋಪದೋಷಗಳ ಹಾಗೂ ಅಪರಾಧಿಗಳ ಮೇಲೆ ಶೀಘ್ರ ಕ್ರಮ ಕೈಗೊಳ್ಳಲು ಇರುವ ಅಡೆತಡೆಗಳನ್ನು ನಿವಾರಿಸಲು ಸಾಧ್ಯವಾಗುವಂತೆ "ವರದಕ್ಷಿಣೆ ನಿಷೇಧ ಕಾಯಿದೆಗೆ" ತಿದ್ದುಪಡಿ ತರುವ ವಿಷಯ ಸರ್ಕಾರ ಪರಿಶೀಲನೆಯಲ್ಲಿದೆ.

ವರದಕ್ಷಿಣೆ ಸಮಸ್ಯೆಗಳ ನಿವಾರಣೆಗಾಗಿ ಪೊಲೀಸ್ ಇಲಾಖೆಯ ಅಧಿಕಾರಿಗಳು, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆಗಾಗ ಸಭೆ ಸೇರಿ ಚರ್ಚಿಸಿ, ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೊಸ ಬಸ್ಸು ಮಾರ್ಗ.

362 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ 1991 ರಿಂದ ಇಲ್ಲಿಯವರೆಗೆ ಹೊಸದಾಗಿ ಎಷ್ಟು ಮಾರ್ಗಗಳಲ್ಲಿ ಹೊಸದಾಗಿ ಎಷ್ಟು ಮಾರ್ಗಗಳಲ್ಲಿ ಬಸ್ಸುಗಳ ಸಂಚಾರ ಪ್ರಾರಂಭಿಸಲಾಗಿದೆ ಮತ್ತು ಯಾವ ಯಾವ ಮಾರ್ಗಗಳಲ್ಲಿ ಪ್ರಾರಂಭಿಸಲಾಗಿದೆ;

ಆ) ಹೊಸ ಮಾರ್ಗಗಳಿಗೆ ಸಾರ್ವಜನಿಕರಿಂದ ಮನವಿ ಪತ್ರಗಳು ಬಂದಿದೆಯೇ ಬಂದಿದ್ದಲ್ಲಿ ಸರ್ಕಾರ ಆ ಬಗ್ಗೆ ಕ್ರಮ ಕೈಗೊಂಡಿದೆಯೇ;

ಇ) ಕನಕಪುರ ತಾಲ್ಲೂಕಿನಲ್ಲಿ ಇನ್ನು ಹೊಸದಾಗಿ ಬಸ್ ಸಂಚಾರ ಪ್ರಾರಂಭಿಸಲು ಎಷ್ಟು ಮಾರ್ಗಗಳ ಸಮೀಕ್ಷೆ (ಸರ್ವೆ) ನಡೆಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1991 ರಿಂದ ಇಲ್ಲಿಯವರೆಗೆ 37 ಹೊಸ ಮಾರ್ಗಗಳಲ್ಲಿ ಬಸ್ಸುಗಳನ್ನು ಪ್ರಾರಂಭಿಸಿದೆ. ಪ್ರತಿ ವರ್ಷದ ವಿವರಗಳು ಕೆಳಕಂಡಂತಿವೆ.

1991	13 ಮಾರ್ಗಗಳು
1992	8 ಮಾರ್ಗಗಳು
1993	16 ಮಾರ್ಗಗಳು